# ನಗರಸಭೆ ಕಾರ್ಯಾಲಯ ರಾಣೇಬೆನ್ನೂರು

ಕ್ರ:ನಸರಾ:ಕಾ.ಟೆಂ.ವಹಿ:02:2010-11 ದಿನಾಂಕ:26-05-2010

## ಟೆಂಡರ್ ಪ್ರಕಟಣೆ

ಕರ್ನಾಟಕ ಪುರಸಭೆ ಅಧಿನಿಯಮ 1964 ಹಾಗೂ ಕ.ಸಾ.ಸಂ.ಪಾ.ಅ 2000ರ ಪ್ರಕಾರ ನಗರಸಭೆಗೆ ವಾಹನವನ್ನು ಬಾಡಿಗೆಯಂತೆ ಒದಗಿಸಲು ಈ ಕೆಳಕಂಡ ನಿಭಂಧನೆಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಕಾರಣ ಬಾಡಿಗೆ ವಾಹನ ಹೊಂದಿದ ಮಾಲಕರು/ಟ್ರಾವೆಲ್ಸ್ ಏಜೆನ್ಸಿಯವರು ತಮ್ಮ ಅತಿ ಕಡಿಮೆ ದರವಾರುಗಳನ್ನು ದಿನಾಂಕ:29-06-2010ರ ಸಂಜೆ 4.30 ಘಂಟೆ ಒಳಗಾಗಿ ನಗರಸಭೆ ಕಛೇರಿಯಲ್ಲಿ ಇಡಲಾದ ಟೆಂಡರ ಬಾಕ್ಸನಲ್ಲಿ ಹಾಕಬೇಕು. ಈ ಕುರಿತು ಪೂರ್ಣ ವಿವರಗಳಿಗೆ ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ಸಮಯದಲ್ಲಿ ಕಾಮಗಾರಿ ಶಾಖೆಯಿಂದ ಪಡೆಯಬಹುದಾಗಿದೆ.

| ಅನಂ | ವಿವರ | ಪ್ರಮಾಣ | ಪ್ರತಿ ತಿಂಗಳ ಬಾಡಿಗೆ |
|---|---|---|---|
| 1. | ಪೌರಾಯುಕ್ತರಿಗೆ ಬಾಡಿಗೆ ವಾಹನ 2009 ಅಥವಾ 2010ರ ಅಂಬಾಸಿಡರ್ ಕಾರ ಒದಗಿಸುವುದು **(ಏ.ಸಿ)** | 01 | |
| 2. | ಪೌರಾಯುಕ್ತರಿಗೆ ಬಾಡಿಗೆ ವಾಹನ 2009 ಅಥವಾ 2010ರ ಟಾಟಾ ಇಂಡಿಕಾಂ ಕಾರ ಒದಗಿಸುವುದು **(ಏ.ಸಿ)** | 01 | |

ಕರಾರುಗಳು

1) ಕೆಲಸಕ್ಕೆ ರೂ.15,000/-ಗಳ ಇ.ಎಂ.ಡಿ ಹಣವನ್ನು ನಗರಸಭೆಯಲ್ಲಿ ನಗದಾಗಲಿ/ಡಿಡಿ ಮೂಲಕ ಹಣ ಸಂಧಾಯ ಮಾಡಬೇಕು (ಠೇವಣಿಗೆ ಬಡ್ಡಿ ಕೊಡಲಾಗುವುದಿಲ್ಲ)
2) ವಾಹನವನ್ನು ವಾರದ 07 ದಿವಸ 24 ಘಂಟೆ (24 x 7)ಯೂ ಲಭ್ಯವಿರುವಂತೆ ಇರಬೇಕು ಹಾಗೂ ರಜೆ ದಿನಗಳಲ್ಲಿ ಸಹ ಕಾರ್ಯನಿರ್ವಹಿಸಬೇಕು.
3) ವಾಹನ ಚಾಲಕರನ್ನು ಬದಲಿಸಬಾರದು.
4) ಮಾಸಿಕ 2500 ಕಿ.ಮಿ ಹೆಚ್ಚಿಗೆ ಉಪಯೋಗಿಸಿದಲ್ಲಿ ಪ್ರತಿ ಕಿ.ಮಿ ದರವನ್ನು ನಿಗದಿಸಬೇಕು.
5) ಸ್ವಂತ ವಾಹನ ಹೊಂದಿರುವವರು ಮಾತ್ರ ಟೆಂಡರನ್ನು ಹಾಕಬೇಕು (ರಿಜಿಸ್ಟ್ರೇಷನ್ ಪತ್ರ ಲಗತ್ತಿಸಬೇಕು)
6) **"ಅಂಬಾಸಿಡರ್ ಕಾರ/ಟಾಟಾ ಇಂಡಿಕಾ, ವಿತ್ ಎ.ಸಿ" 2009 ಅಥವಾ 2010ರ ಮಾಡಲ್** ಕಾರನ್ನು ಅದಕ್ಕೆ ಸಮನಾದ ವಾಹನಗಳಿಗೆ ಮೊದಲ ಪ್ರಾಸಸ್ತೆ ನೀಡಲಾಗುವುದು. ಇದರಲ್ಲಿ ಯವುದಾದರೂ ಒಂದನ್ನು ತೆಗೆದುಕೊಳ್ಳಲಾಗುವುದು.
7) ಮಾಸಿಕ 2500 ಕಿ.ಮಿ ಗರಿಷ್ಟ ಅವಧಿ ಇರಬೇಕು.
8) ವಾಹನ ಗುತ್ತಿಗೆ ಅವಧಿ ಕೆಲಸದ ಆದೇಶ ಕೊಟ್ಟ ನಂತರ 2 ವರ್ಷಗಳು.
9) ಪೊರೈಸಿದ ವಾಹನವನ್ನು ಕಛೇರಿ ಕೆಲಸ ಮುಗಿದ ನಂತರ ನಗರಸಭೆಯ ಕಟ್ಟಡವಾಗಲಿ ಇಲ್ಲವೇ ಸಂಬಂಧಪಟ್ಟ ಅಧಿಕಾರಿಗಳ ಮನೆಯ ಆವರಣದಲ್ಲಿ ನಿಲುಗಡೆ ಮಾಡಬೇಕು.
10) ವಾಹನಕ್ಕೆ ಬೇಕಾಗುವ ಡೀಸೆಲ್, ಚಾಲಕರ ವೇತನ, ಭತ್ಯೆ, ರಿಪೇರಿ ವೆಚ್ಚ, ಅಪಘಾತಗಳಿಂದಾಗುವ ಎಲ್ಲಾ ವೆಚ್ಚಗಳನ್ನು ಭರಿಸುವುದು ವಾಹನ ಮಾಲಿಕರ ಜವಾಬ್ದಾರಿಯಾಗಿರುತ್ತದೆ.
11) ವಾಹನ ಸುಸ್ತಿಯಲ್ಲಿರುವ ಬಗ್ಗೆ ಆರ್.ಟಿ.ಓ ಪ್ರಮಾಣ ಪತ್ರ ಹಾಜರಪಡಿಸಬೇಕು.
12) ವಾಹನ ಚಾಲಕ ಗೈರು ಹಾಜರು ಉಳಿದರೆ ದಂಡ ವಿಧಿಸಲಾಗುವುದು.
13) ಕರಾರುಗಳನ್ನು ಉಲ್ಲಂಘಿಸಿದಲ್ಲಿ ಇ.ಎಂ.ಡಿ ಹಣವನ್ನು ಮುಟ್ಟುಗೋಲು ಹಾಕಲಾಗುವುದು.
14) ಹೆಚ್ಚಿನ ಮಾಹಿತಿಯನ್ನು ನಗರಸಭೆ ಕಛೇರಿಯಲ್ಲಿ ಪಡೆಯಬಹುದಾಗಿದೆ.
15) ಮತ್ತಾವುದೇ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದೆ.

ಸೂಚನೆ : ಹೆಚ್ಚಿನ ಮಾಹಿತಿ ಮತ್ತು ನಿಭಂಧನೆಗೆ ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ http// ~~www.ranebennurucity.gov.in~~ www.ranebennurcity.gov.in ರಲ್ಲಿ ಪಡೆಯಬಹುದಾಗಿದೆ.

**(ರಾಮಪ್ಪ ಭೀಮಪ್ಪ ಕೋಲಕಾರ)**
**ಅಧ್ಯಕ್ಷರು**
ನಗರಸಭೆ, ರಾಣೇಬೆನ್ನೂರು

**(ಮೂಕಪ್ಪ ಕರಭೀಮಣ್ಣನವರ)**
**ಪೌರಾಯುಕ್ತರು**
ನಗರಸಭೆ, ರಾಣೇಬೆನ್ನೂರು

K_tender